INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
Page No,80-85
Peer -Reviewed, Refereed Journal

# ಮಾಸ್ತಿ ವೆಂಕಟೇಶ ಅಯ್ಯಂಗಾರರ "ಚಿಕವೀರರಾಜೇಂದ್ರ" ಕಾದಂಬರಿಯಲ್ಲಿ ಸ್ತ್ರೀ –ಒಂದು ಅವಲೋಕನ

*.ಸಂತೋಷ ಎಸ್. ಪಿ.[1]
**.ಪ್ರೊ.ವಿಜಯಕುಮಾರಿ ಎಸ್.ಕರಿಕಲ್.[2]

ಮಾಸ್ತಿ ವೆಂಕಟೇಶ ಅಯ್ಯಂಗಾರರ "ಚಿಕವೀರರಾಜೇಂದ್ರ" ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳಿಗೆ ಪ್ರಮುಖ ಸ್ಥಾನವನ್ನು ನೀಡಲಾಗಿದೆ. 1983ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಐತಿಹಾಸಿಕ ಕಾದಂಬರಿಯು ಕೊಡಗಿನ ಕೊನೆಯ ರಾಜನ ಸಂದರ್ಭದಲ್ಲಿ ಮಹಿಳಾ ಪಾತ್ರಗಳ ಜೀವನ, ಸಂಘರ್ಷಗಳು ಮತ್ತು ಶಕ್ತಿಯನ್ನು ವಿಭಿನ್ನವಾಗಿ ಮತ್ತು ವಿಶಿಷ್ಟವಾಗಿ ಚಿತ್ರಿಸುತ್ತದೆ. ಮಾಸ್ತಿಯವರ ಕಾದಂಬರಿಯಲ್ಲಿ ರಾಣಿ ಗೌರಮ್ಮ ಅತ್ಯಂತ ಪ್ರಬಲ ಪಾತ್ರವಾಗಿದೆ. ಈಕೆಯ ಮೂಲಕ ಭಾರತೀಯ ಸ್ತ್ರೀಯ ಪ್ರಾಮುಖ್ಯತೆ ಮತ್ತು ಸತಿಧರ್ಮದ ಭಾವನೆ ಪ್ರತಿಫಲಿತಗೊಂಡಿದೆ. ದೇವಮ್ಮಾಜಿ ಮತ್ತು ಇತರ ಸ್ತ್ರೀ ಪಾತ್ರಗಳ ಮೂಲಕ ಆ ಕಾಲದ ಮಹಿಳೆಯರ ಸಮಾಜದಲ್ಲಿನ ಸ್ಥಾನಮಾನ ಮತ್ತು ಅವರ ಸಂಘರ್ಷಗಳನ್ನು ಚಿತ್ರಿಸಲಾಗಿದೆ. ಮಾಸ್ತಿಯವರು ಆದರ್ಶ ಸ್ತ್ರೀ ಪಾತ್ರಗಳ ಬಗೆಗೆ ಅಪಾರ ಒಲವು ತೋರಿದ್ದಾರೆ. ಅವರ ಸಾಹಿತ್ಯದಲ್ಲಿ ಆದರ್ಶ ಪಾತ್ರಗಳು ಅಧಿಕ, ಆದರೆ ದುಷ್ಟರು, ಕ್ರೂರಿಗಳು, ಅಯೋಗ್ಯರು ಎನ್ನಬಹುದಾದ ಪಾತ್ರಗಳ ಬಗೆಗೂ ಹೆಚ್ಚಿನ ಅನುಕಂಪ ತೋರುತ್ತಾರೆ. ಇದು ಅವರ ಮಾನವೀಯ ದೃಷ್ಟಿಕೋನದ ದ್ಯೂತಕವಾಗಿದೆ.

ಕಾದಂಬರಿಯಲ್ಲಿ ಮಹಿಳಾ ಪಾತ್ರಗಳು ಅಕ್ಕಮಹಾದೇವಿ ಮಾರ್ಗದ ಸ್ಪಷ್ಟ ಸ್ತ್ರೀವಾದಿ ದೃಷ್ಟಿಕೋನದಂತೆ ಬಂಡಾಯವಾಗದೆ ಹೆಚ್ಚು ಸಂಯಮಿತ ಮತ್ತು ಸಾಂಪ್ರದಾಯಿಕ ಚೌಕಟ್ಟಿನಲ್ಲೆ ವರ್ತಿಸುತ್ತಾರೆ. ಮಹಿಳಾ ಪಾತ್ರಗಳಿಗೆ ನೈತಿಕ ಶ್ರೇಷ್ಠತೆ ಮತ್ತು ಬುದ್ಧಿವಂತಿಕೆಯನ್ನು ಒದಗಿಸಿದ್ದಾರೆ. ಇಲ್ಲಿ ಪುರುಷ ಪ್ರಧಾನ ಸಮಾಜದ ಪರಿಣಾಮಗಳನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಮಹಿಳೆಯರ ಅಸಹಾಯಕತೆ ಮತ್ತು ಸಾಮಾಜಿಕ ಮಿತಿಯನ್ನು ಎತ್ತಿ ತೋರಿಸಲಾಗಿದೆ. ಮಹಿಳಾ ಪಾತ್ರಗಳು ಸಾಂಪ್ರದಾಯಿಕತೆಯನ್ನು ದಾಟದಿರುವುದು, ಆದರ್ಶೀಕರಣದ ಮೂಲಕ ವಾಸ್ತವಿಕ ಸಮಸ್ಯೆಗಳನ್ನು ಮರೆಮಾಡುವ ಪ್ರವೃತ್ತಿಯನ್ನು ಕಾಣಲಾಗಿದೆ. ಕಾದಂಬರಿಯಲ್ಲಿ ಸ್ತ್ರೀ ಚಿಂತನೆಗಳು ತನ್ನ ಕಾಲದ

[1].ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ ಮೈಸೂರು
[2] .ಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಸಾಮಾಜಿಕ ಮೌಲ್ಯಗಳ ಸಂದರ್ಭದಲ್ಲಿ ಪ್ರಗತಿಶೀಲವಾಗಿ ಕಂಡುಬಂದರೂ ಸಹ ಸಾಮಾಜಿಕ ಮಿತಿಗಳನ್ನು ಹೊಂದಿವೆ. ರಾಣಿ ಗೌರಮ್ಮಳ ಪಾತ್ರದ ಮೂಲಕ ಅವರು ಆದರ್ಶ ಸ್ತ್ರೀತ್ವದ ಪರಿಕಲ್ಪನೆಯನ್ನು ಪ್ರಸ್ತುತಪಡಿಸಿದ್ದಾರೆ. ಆದರೆ ಇದು ಸಾಂಪ್ರದಾಯಿಕ ಚೌಕಟ್ಟಿನೊಳಗೆ ಸೀಮಿತವಾಗಿ ಉಳಿದಿದೆ. ಕಾದಂಬರಿಯಲ್ಲಿ ಮಹಿಳಾ ಪಾತ್ರಗಳ ಮನೋವೈಜ್ಞಾನಿಕ ಚಿತ್ರಣದ ಹಲವು ಭಾಗಗಳಿವೆ.

ಕೊಡಗಿನ ಇತಿಹಾಸದಲ್ಲಿ ಸ್ತ್ರೀಗೆ ಮಹತ್ವ ನೀಡಿದ್ದು ಬಹಳ ಕಡಿಮೆ. ಆದರೆ ಮಾಸ್ತಿ ಅವರು ತಮ್ಮ ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳನ್ನು ಉನ್ನತೀಕರಿಸಿದ್ದಾರೆ. ಕಾದಂಬರಿಯ ಕಾಲ್ಪನಿಕ ಪಾತ್ರಗಳಾದ ಗೌರಮ್ಮಾಜಿ, ಗೌರಮ್ಮ, ಭಗವತಿ ಪಾತ್ರಗಳು ಇದಕ್ಕೆ ಉದಾಹರಣೆಗಳಾಗಿವೆ. ಈ ಮೂರು ಪಾತ್ರಗಳು ಕಾದಂಬರಿಯ ತಿರುಳಾಗಿವೆ. ಇಡೀ ಕಾದಂಬರಿಯಾದ್ಯಂತ ಆವರಿಸಿರುವ ಪಾತ್ರಗಳಾಗಿವೆ. ಈ ಕಾದಂಬರಿಯಲ್ಲಿ ಸ್ತ್ರೀಯರನ್ನು ಚಿತ್ರಿಸುವ ರೀತಿಯು ಆ ಕಾಲದ ಸಮಾಜ, ರಾಜಕೀಯ ಮತ್ತು ವೈಯಕ್ತಿಕ ಉದ್ವೇಗಗಳ ಸಂಕೀರ್ಣ ರೂಪಕವಾಗಿದೆ. ಕಾದಂಬರಿಯಲ್ಲಿ ಪ್ರಜೆಗಳ ಭದ್ರತೆ ಕುರಿತು ಭಾವೋದ್ರೇಕ ವ್ಯಕ್ತಪಡಿಸುವ ಮರ್ಯಾದಾಪೂರ್ಣ ಮಮತೆ ಕುಶಲತೆಯಿಂದ ವ್ಯಕ್ತವಾಗಿದೆ. ಸ್ತ್ರೀ ಚಿತ್ರಣವು ರಾಜಕೀಯ, ಸಾಮಾಜಿಕ ಹಾಗೂ ವೈಯಕ್ತಿಕ ಆಯಾಮದಲ್ಲಿ ಸಮತೋಲನ ಹೊಂದಿದೆ. ಸ್ತ್ರೀಯರಲ್ಲಿ ಸಮರ್ಥತೆ, ಸಹನಶೀಲತೆ ಮತ್ತು ವೈಯಕ್ತಿಕ ಆಶಯಗಳ ಸಂಕೀರ್ಣತೆಗೆ ವಿಷಯವಸ್ತು ನೀಡುತ್ತದೆ.

ಸ್ತ್ರೀ ಚಿತ್ರಣದ ಮೂಲಕ ಮಾಸ್ತಿಯವರು ಆ ಕಾಲದ ಪುರುಷ ಪ್ರಧಾನ ಸಮಾಜದ ಸ್ವರೂಪವನ್ನು ಚಿತ್ರಿಸಿದ್ದಾರೆ. ಮಾಸ್ತಿಯವರ ದೃಷ್ಟಿಯಲ್ಲಿ ಆದರ್ಶ ಭಾರತೀಯ ಸ್ತ್ರೀತ್ವವು ತ್ಯಾಗ ಮತ್ತು ಸೇವೆಯಲ್ಲಿ ಇರುತ್ತದೆ. 19ನೇ ಶತಮಾನದ ಕೊಡಗಿನ ಸಮಾಜದಲ್ಲಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ಮಾಸ್ತಿಯ ಚಿಂತನೆಯು ಪ್ರಗತಿಪರವಾಗಿತ್ತು.

**ರಾಣಿ ಗೌರಮ್ಮ:** ಆದರ್ಶ ಭಾರತೀಯ ಸ್ತ್ರೀತ್ವದ ಸಂಕೇತವಾಗಿ, ಅತ್ಯಂತ ಪ್ರಭಾವಶಾಲಿ ಮಹಿಳಾ ಪಾತ್ರವಾಗಿ ಚಿತ್ರಣಗೊಂಡಿದೆ. ಕಾದಂಬರಿಯಲ್ಲಿ ಇದೊಂದು ಕಾಲ್ಪನಿಕ ಪಾತ್ರವಾಗಿದೆ. ಚಿಕವೀರ ರಾಜೇಂದ್ರನಿಗೆ ಹದಿಮೂರು ಪತ್ನಿಯರು ಇದ್ದರು. ಗಂಗಮ್ಮಾಜಿ, ದೇವಮ್ಮಾಜಿ ಮತ್ತು ನಂಜಮ್ಮಾಜಿ ಪಟ್ಟದ ರಾಣಿಯರು. ಕಾದಂಬರಿಯಲ್ಲಿ ರಾಣಿ ಗೌರಮ್ಮ ಅತ್ಯಂತ ಪ್ರಬಲ ಪಾತ್ರವಾಗಿದೆ. ಇವಳ ಮೂಲಕ ಭಾರತೀಯ ಸ್ತ್ರೀಯ ಪ್ರಾಮುಖ್ಯತೆ ಮತ್ತು ಸತಿಧರ್ಮದ ಭಾವನೆ ಪ್ರತಿಫಲಿತಗೊಂಡಿದೆ. ದೇವಮ್ಮಾಜಿ ಮತ್ತು ಇತರ ಸ್ತ್ರೀ ಪಾತ್ರಗಳ ಮೂಲಕ ಆ ಕಾಲದ ಮಹಿಳೆಯರ ಸಮಾಜದಲ್ಲಿಯ ಸ್ಥಾನಮಾನ ಮತ್ತು ಅವರ ಸಂಘರ್ಷಗಳನ್ನು ಚಿತ್ರಿಸಲಾಗಿದೆ. ಗೌರಮ್ಮ ತನ್ನ ವೈಯಕ್ತಿಕ ಇಷ್ಟಗಳನ್ನು ತ್ಯಜಿಸಿ ಕೌಟುಂಬಿಕ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಆದ್ಯತೆ ನೀಡುತ್ತಾಳೆ. ಮಾಸ್ತಿಯವರು ಅಕೆಯನ್ನು ಭಾರತೀಯ ಸ್ತ್ರೀತ್ವದ ಪರಮ ಉತ್ಕರ್ಷತೆಯ ಉದಾಹರಣೆಯಾಗಿ ಚಿತ್ರಿಸಿದ್ದಾರೆ. ಅವಳು ಆತ್ಮತ್ಯಾಗ, ಉದಾರತೆ, ಚಿಂತನಾಶೀಲತೆ ಮತ್ತು ಜವಾಬ್ದಾರಿ ಭಾವನೆಯ ಸಾಕಾರವಾಗಿ ರಾಜನಲ್ಲಿಲ್ಲದ ಎಲ್ಲ ಗುಣಗಳನ್ನು

ಅವಳಲ್ಲಿ ಚಿತ್ರಿಸಿದ್ದಾರೆ. ಗೌರಮ್ಮ ತನ್ನ ಪತಿಯ ಮೇಲಿನ ಪ್ರೀತಿ ಮತ್ತು ಗೌರವ ಕಾರಣದಿಂದ ಕೊಡಗಿನ ಇತಿಹಾಸವನ್ನು ಸಕಾರಾತ್ಮಕವಾಗಿಸಲು ಪ್ರಯತ್ನಿಸಿ ಅದರ ವೈಫಲ್ಯದ ದಾರಿಯಾದಳು. ಆಕೆ ಮಂತ್ರಿಗಳ ಮಾತಿನಂತೆ ನಡೆದಿದ್ದರೆ ಬಹುಶಃ ಕೊಡಗು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬಹುದಿತ್ತು. ಆದರೆ ಆಕೆ ರಾಜ್ಯಕ್ಕಿಂತ ಸತಿಧರ್ಮ ಒಳ್ಳೆಯದು ಎಂದುಕೊಂಡಳು. ದೇವಮ್ಮಾಜಿಯು ಮೂಲತಃ ಸಿಂಹಾಸನದ ಆನುವಂಶಿಕ ಹಕ್ಕುದಾರಳಾದಳು. ಅವಳ ತಂದೆ ದೊಡ್ಡವೀರರಾಜ ಗಂಡು ಮಕ್ಕಳಿಲ್ಲದೆ ತನ್ನ ಮಗಳು ರಾಜ್ಯವಾಳಬೇಕೆಂದು ಬಯಸಿದ್ದನು. ಆದರೆ ಪುರುಷ ಪ್ರಧಾನ ವ್ಯವಸ್ಥೆಯ ಒತ್ತಡದಿಂದ ಲಿಂಗರಾಜ ಅವಳನ್ನು ಗಾದಿಯಿಂದ ಇಳಿಸಿ ತಾನೇ ರಾಜನಾದನು. ಇದು ಆ ಕಾಲದ ಸ್ತ್ರೀಯರ ಅಧಿಕಾರದ ಹೋರಾಟವನ್ನು ಪ್ರತಿನಿಧಿಸುತ್ತದೆ.

"ಮರುದಿನ ಲಿಂಗರಾಜ ಸೊಸೆಯ ಬಳಿಗೆ ಬಂದು, "ನೀನು ಮನೆಯ ಲಕ್ಷ್ಮಿ ಆಗಬೇಕೆಂದು ನಾನೇ ನಿನ್ನನು ಹುಡುಕಿ ಕರೆತಂದಿದ್ದೇನೆ. ನಿನ್ನ ಗಂಡನಿಗೆ ಬುದ್ಧಿ ಇಲ್ಲ. ಇಬ್ಬರಿಗಿರಬೇಕಾದ ಬುದ್ಧಿಯನ್ನು ನೀನೊಬ್ಬಳೇ ತೋರಿಸಬೇಕು. ನೀನು ಬದುಕಬೇಕು. ಅವನನ್ನು ಬದುಕಿಸಿಕೊಳ್ಳಬೇಕು. ಗಂಡ ಒಳ್ಳೆಯವನಲ್ಲ ಎಂದು ಹೆಂಡತಿಯೂ ಒಳ್ಳೆಯವಳಾಗದೆ ಹೋದರೆ ಅರಮನೆಯಲ್ಲ ಬರಿಮನೆ ಕೂಡ ಉಳಿಯುವಂತಿಲ್ಲ. ಅರಮನೆ ದೊರೆತನ ನಿನ್ನದು ಅಂತ ತಿಳಿ. ಅದು ನಿನ್ನದಾಗಿರಲಿ ಅನ್ನುವುದಕ್ಕಾಗಿ, ಇವನನ್ನು ಗಂಡ ಅಂತ ಬಾಳಿಸು. ಮರ ಉಳಿಸಿ ಹಣ್ಣು ತಿನ್ನುವುದು ಜಾಣ," ಎಂದನು.

ಅತ್ತೆ ದೇವಕ್ಕನೂ ಸೊಸೆಗೆ ಸಮಾಧಾನ ಹೇಳಿದಳು. "ಅರಮನೆಗೆ ಬಂದ ಹೆಣ್ಣಿಗೆ ಈ ಅವಮಾನ ಕಟ್ಟಿಟ್ಟದ್ದು ತಾಯಿ. ನಾನುಂಡದಲ್ಲವೇ ಇದೆಲ್ಲ. ನಿಮ್ಮ ಮಾವ ನನ್ನ ಕಣ್ಣೆದುರಿಗೇ ಬೇರೆಯವರೊಂದಿಗೆ ಸದರ ಮಾಡಿದರು. ಈ ಮಗನೇ ಮೇಲು, ಬೇರೆ ಕಡೆ ಆಡಿ ಬರತಾನೆ. ತಾಳಿಕೊ ಅಮ್ಮಯ್ಯ; ಎರಡು ಮಗು ಹೆತ್ತುಕೊ; ಅದು ಪ್ರಪಂಚ ಅಂದುಕೊ. ಹೆಣ್ಣು ಅಂತ ಹುಟ್ಟಿದ ಮೇಲೆ ಇದರ ಮೇಲೆ ಸುಖ ಇಲ್ಲ. ಇವ ಇನ್ನೊಬ್ಬಳನ್ನೊ, ಇನ್ನಿಬ್ಬರನ್ನೊ, ರಾಣಿ ಅಂತ ಅರಮನೆಗೆ ತರಬಾರದು ಅಂತ ಆಣೆ ತಕ್ಕೊಂಡಿದ್ದೇನೆ; ತರದೆ ಇದ್ದರೆ ಅಷ್ಟೇ ಸಾಕು ಅಂದೇನು."[1]

ಬುದ್ಧಿವಾದದ ಮಾತುಗಳು ಅಂದಿನ ಕಾಲದ ಸ್ತ್ರೀಯರ ಸ್ಥಿತಿಗತಿಗಳನ್ನು ತಿಳಿಸುತ್ತವೆ. ಅರಮನೆಯ ಜೀವನ ಸುಖವಾಗಿರುತ್ತದೆ ಎಂದು ಹೊರಗಿನವರು ಕಾಣುತ್ತಾರೆ. ಆದರೆ ಒಳ ತಿರುಳು ಹಾಗಿರುವುದಿಲ್ಲ ಎಂಬುದು ಇಲ್ಲಿ ವ್ಯಕ್ತವಾಗಿದೆ.

ಕಾದಂಬರಿಯಲ್ಲಿ ಗೌರಮ್ಮಾಜಿ ಒಬ್ಬ ಪ್ರಬುದ್ಧ ಮಹಿಳೆಯಾಗಿ ಕಾಣುತ್ತಾಳೆ. ಅರಮನೆಯ ಇಡಿ ಜವಾಬ್ದಾರಿಯೆ ಆಕೆಯ ಕೇಂದ್ರವಾಗಿ ಮುಂದುವರೆಯುತ್ತದೆ. ಅರಮನೆಯಲ್ಲಿ ನಡೆಯುವ ಎಲ್ಲಾ ದುಷ್ಕೃತ್ಯಗಳಿಗೂ ಸಮಾನವಾದ ಸುಕೃತ್ಯಗಳು ಈಕೆಯಿಂದ ನಡೆಯುತ್ತವೆ. ಲೇಖಕರು ದುಷ್ಟನ ಕೈಗೆ ಸಿಕ್ಕಿದ ಒಬ್ಬ ಆದರ್ಶ ಸ್ತ್ರೀಯ ಕಾಲ್ಪನಿಕ ಚಿತ್ರಣವನ್ನು ನೀಡಿದ್ದಾರೆ. ಆದರೆ ರಾಜನನ್ನು ಗಾದಿಯಿಂದ ಇಳಿಸಿದಾಗ

ರಾಣಿಯನ್ನು ಅಧಿಕಾರ ವಹಿಸಿಕೊಳ್ಳಲು ಕೇಳಿಕೊಂಡಾಗ ಆಕೆ ನಿರಾಕರಿಸುತ್ತಾಳೆ. ಗಂಡ ಎಲ್ಲಿರುತ್ತಾನೆಯೋ ಅಲ್ಲಿಯೆ ನನ್ನ ಸ್ಥಳ, ಆತನನ್ನು ಗಡಿಪಾರು ಮಾಡಿದರೆ ನಾನು ಆತನೊಂದಿಗೆ ಹೋಗುವುದೇ ಉಚಿತ ಎಂದು ಆಕೆ ತನ್ನ ಸ್ವಾರ್ಥವನ್ನಷ್ಟೇ ಯೋಚಿಸುತ್ತಾಳೆ. ರಾಜ್ಯದ ಬಗೆಗೆ ಕಿಂಚಿತ್ತು ಯೋಚಿಸುವುದಿಲ್ಲ.[2]

ರಾಣಿ ಗೌರಮ್ಮ ಕೇವಲ ಪತಿವ್ರತೆಯಾಗಿ ಮಾತ್ರ ಸೀಮಿತಳಾಗಿರದೆ, ರಾಜಕೀಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಸಮಾಜದ ಲಿಂಗಾಧಾರಿತ ಸೀಮಿತ ದೃಷ್ಟಿಕೋನ ಅವಳ ಪ್ರಯತ್ನಗಳನ್ನು ವಿಫಲಗೊಳಿಸುತ್ತದೆ. ರಾಣಿ ಗೌರಮ್ಮ ತನ್ನ ನೈತಿಕ ಶಕ್ತಿಯಿಂದ ರಾಜ್ಯದ ಒಟ್ಟಾರೆ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಪ್ರವೃತ್ತಳಾಗುತ್ತಾಳೆ. ಕಾದಂಬರಿಯಲ್ಲಿ ಮಹಿಳೆಯರು ತಮ್ಮ ಅಂತರ್ಗತ ಶಕ್ತಿ ಮತ್ತು ಬುದ್ಧಿವಂತಿಕೆಯನ್ನು ವ್ಯಕ್ತಪಡಿಸುತ್ತಾರೆ. ಮಾಸ್ತಿಯವರು ಮಹಿಳಾ ಪಾತ್ರಗಳ ಮೂಲಕ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸಿದ್ದಾರೆ.

**ಭಗವತಿ :** ಪಾತ್ರವು ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಸ್ತ್ರೀಗೆ ಹೊಸ ದೃಷ್ಟಿಕೋನವನ್ನು ನೀಡುತ್ತದೆ. ಅತ್ಯಂತ ಸಂವೇದಿ, ಸಂಸ್ಕೃತಿಪರ ಸಬಂಧಿತ ಈ ಪಾತ್ರವು ಸ್ತ್ರೀ ಅಸ್ತಿತ್ವದ ಸಂಘರ್ಷವನ್ನು, ಸಾಮಾಜಿಕ ಬಾಂಧವ್ಯಗಳನ್ನು, ಹಾಗೂ ಆತ್ಮ ವಿಶ್ವಾಸದ ಪರಾಕಾಷ್ಠೆಯನ್ನು ಬಿಂಬಿಸುತ್ತದೆ. ಭಗವತಿ ಸರ್ವ ಪ್ರಥಮ ಯೌವನವನ್ನು ಅತಿಯಾದ ಆತ್ಮಸ್ಥೈರ್ಯದಿಂದ ನಿಭಾಯಿಸುವ ಯುವತಿಯಾಗಿ ಕಲ್ಪಿತವಾಗಿದ್ದಾಳೆ. ಹಿಂಸಾತ್ಮಕ ರಾಜಕೀಯ ವ್ಯವಸ್ಥೆಯೊಳಗೆ ಹಲವಾರು ಅಪಾಯಗಳಿದ್ದರೂ ಲಿಂಗರಾಜನ ಪತ್ನಿಯಾಗುವ ಮೊದಲು ತನ್ನ ಹಕ್ಕು–ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಬಯಸುವ ಚೇತನಭರಿತ ವ್ಯಕ್ತಿತ್ವವನ್ನು ಅವಳಲ್ಲಿ ಲೇಖಕರು ವ್ಯಕ್ತಡಿಸಿದ್ದಾರೆ. ಈ ಮೂಲಕ ಸ್ತ್ರೀಯರೊಳಗಿನ ಸ್ವಾಯತ್ತತೆಯು ಉತ್ಸಾಹದ ಹೊಸ ಅರ್ಥವನ್ನು ಪಡೆದುಕೊಂಡಿದೆ.

ಭಗವತಿ ಎನ್ನುವ ನಾಮವು ರಾಜಕೀಯ ಗೊಂದಲಗಳೊಳಗೆ ತಾನೇ ಒಂದು ರೂಪಕವಾಗುತ್ತದೆ. ಸಂಸ್ಕೃತಿಯನ್ನು ಸಮಾಜದಲ್ಲಿ ಉಳಿಸುವುದು, ಮೌಲ್ಯಗಳ ಪೋಷಣೆ ಮಾಡುವುದು ಎಂಬ ಅರ್ಥದಲ್ಲಿ ಭಗವತಿ ಹೆಸರು ಸೂಚಕವಾಗಿದೆ. ಹಾಗೂ ಕಾದಂಬರಿಯಲ್ಲಿ ಅರಮನೆಗೆ ಸೇರಿದ ಕ್ಷಣದಲ್ಲಿ ಅವಳು ನಿರ್ಜೀವ ವಾಸ್ತವಿಕತೆಗಳನ್ನು ಅಪ್ಪಿಕೊಳ್ಳುವಂತೆ, ಭಗವತಿ ಎಂಬ ಹೆಸರು ಆಕೆಯಲ್ಲಿನ ಸ್ತ್ರೀ ಶಕ್ತಿಯನ್ನು, ರಕ್ಷಣೆಯನ್ನು, ನೈತಿಕ ಮೌಲ್ಯಗಳನ್ನು ಸಾಂಕೇತಿಕರಿಸುತ್ತದೆ. ರಾಜಪ್ರಭುತ್ವದ ಪರಿದಿಗೆ ಒಳಪಟ್ಟ ನಂತರ, ಭಗವತಿಗೆ ಎದುರಾಗುವ ಕಾನೂನು, ಸಾಂಪ್ರದಾಯಿಕ ನಿಯಮಗಳು, ಇತಿಹಾಸದಿಂದ ಬೇಕಾದ ಒತ್ತಾಯಗಳು ಇವು ಕಠಿಣ ಸವಾಲುಗಳಾಗುತ್ತವೆ. ಪ್ರೀತಿಯ ಅರ್ಪಣೆ ಹಾಗೂ ಅಧಿಕಾರದ ಮರುರಚನೆಯ ನಡುವಿನ ಬೇರುಗಳು ಚಿತ್ರಿತವಾಗುತ್ತವೆ. ಕಾದಂಬರಿ ಅವಳ ಉಡುಗೆ, ಭಾವಾಭಿವ್ಯಕ್ತಿ, ನಿಶ್ಶಬ್ದ ಸಂವೇದನೆಗಳಿಂದ ಆಕೆಯ ಗುಣಲಕ್ಷಣಗಳು ಎಷ್ಟು ಸ್ವಚ್ಛವಾಗಿವೆಯೆಂಬ ಭಾವನೆಯನ್ನು ಮೂಡಿಸುತ್ತದೆ. ಭಗವತಿ ಸ್ತ್ರೀಯರ ಸ್ವಾತಂತ್ರ್ಯ ಹೋರಾಟದ ಸಂಕೇತ, ರಾಜಕೀಯ–ಸಾಮಾಜಿಕ

ಬಂಧನಗಳ ನಡುವೆ ಸಮನ್ವಯ ಸಾಧಿಸುವ ದೈವಿ ಶಕ್ತಿಯ ರೂಪಕವಾಗಿದೆ. ಇವಳ ಪಾತ್ರವು ಕಾದಂಬರಿಯನ್ನು ಇತಿಹಾಸಕ್ಕಿಂತ ಹೆಚ್ಚಾಗಿ ಮಹಿಳಾ ಮಾನವೀಯತೆಯ ಗಾಥೆಯನ್ನಾಗಿ ಚಿತ್ರಿಸಿದೆ. ಭಗವತಿ ಧಾರ್ಮಿಕ–ಸಾಂಸ್ಕೃತಿಕ ಬಂಧನಗಳ ಮಧ್ಯೆ ಸಮತೋಲನ ಸಾಧಿಸುವ ಶಕ್ತಿಯ ಸಂಕೇತವಾಗುತ್ತದೆ.

ಭಗವತಿ ವಿದ್ಯೆ ಮತ್ತು ಶಾಸ್ತ್ರೀಯ ಕಲೆಯ ಜ್ಞಾನ ಮಾತ್ರವಲ್ಲದೆ, ದೇವಿಯ ಆರಾಧನೆಗೆ ಅರ್ಪಿಸಿಕೊಂಡಿರುವ ಹೆಣ್ಣಾಗಿದ್ದಾಳೆ. ಕಾದಂಬರಿಯಲ್ಲಿ ಪ್ರಾಥಮಿಕವಾಗಿ ರಾಜಕೀಯ ಶಕ್ತಿ–ಸಂಬಂಧಗಳು ಮುಖ್ಯವಾಗಿದ್ದರೂ ಭಗವತಿ ತನ್ನ ತಾಯಿ–ಮೂಲಗಳನ್ನೂ ಸೀಮಿತ ಅನುಭಾವವನ್ನೂ ಸಾಂದರ್ಭಿಕವಾಗಿ ಕಾದಂಬರಿ ಸಾಪೇಕ್ಷವಾಗಿ ಚಿತ್ರಿಸಿದೆ. ಈ ಮೂಲಕ ಸ್ತ್ರೀಯರ ಧಾರ್ಮಿಕ–ಸಾಂಸ್ಕೃತಿಕ ಪಾತ್ರದ ಮಹತ್ವವನ್ನು ಲೇಖಕರು ಅರಸುತ್ತಾರೆ.

ಭಗವತಿ ಕುಂಟು ಬಸವನನ್ನು ಅಪ್ಪಿಕೊಂಡ ಸಂದರ್ಭದಲ್ಲಿ ಆತನ ಮನಸ್ಸಿನಲ್ಲಿ ಹೊಯ್ದಾಡುವ ಆಲೋಚನೆಗಳು, ಆತನ ಮಾನಸಿಕ ತೊಳಲಾಟಗಳು ಕಾದಂಬರಿಯಲ್ಲಿ ವ್ಯಕ್ತವಾಗಿವೆ. ಶ್ರೀಮಂತಿಕೆ, ಹಣ ಇರುವಲ್ಲಿಗೆ ಹೆಣ್ಣಿನ ಸೌಂದರ್ಯ ವ್ಯಾಪಾರಕ್ಕೆಂದು ಬರುತ್ತದೆ ಎಂಬ ಮಾತುಗಳನ್ನು ಹೇಳುವ ಮೂಲಕ ವ್ಯಭಿಚಾರದ ಮತ್ತೊಂದು ಮುಖವನ್ನು ಲೇಖಕರು ತೆರೆದಿಡುತ್ತಾರೆ.

"ಯಾವ ಅರಮನೆಯಲ್ಲಿಯೂ ಅಷ್ಟೆ ; ಮಡಕೇರಿಯ ಅರಮನೆಯಲ್ಲೂ ಅಷ್ಟೆ; ಅರಮನೆಯ ಮಾತೇನು, ಹಣವಂತನಾದ ಯಾವ ಮನುಷ್ಯನ ಮನೆಯಲ್ಲೂ ಅಷ್ಟೆ, 'ನನ್ನನ್ನು ನೀನು ಕೊಳ್ಳುತ್ತೀಯಾ' ಎಂದು ಕೇಳಿಕೊಂಡು ಹೆಣ್ಣು ಚೆಲುವು ವ್ಯಾಪಾರಕ್ಕೆ ಬರುತ್ತದೆ. ಮನೆಯ ಒಡೆಯ ಈ ಒಲವಿನ ಮನುಷ್ಯ ಎನ್ನುವುದು ಬೇರೆ ಕಂಡಿತೋ ಅರಮನೆಯ ಬಾಳುವೆ ಚೆಲುವಿನ ಮಾರಾಟ ಮೇಲಾಟದ ಸಂತೆಯೇ ಆಗುತ್ತದೆ. ವೀರರಾಜ ರಾಜನಾದದ್ದು ಮೊದಲಾಗಿ ಅವನ ದೃಷ್ಟಿಯನ್ನು ಸೆಳೆಯುವುದಕ್ಕೆ ಹಲವು ರೀತಿಯ ಚೆಲುವು ಅರಮನೆಗೆ ಬಂದಿತ್ತು ; ಅರಸನ ದೃಷ್ಟಿ ತನ್ನ ಕಡೆಗೆ ತಿರುಗಿದಾಗ ತಾನು ಧನ್ಯವೆಂದೇ ತಿಳಿದಿತ್ತು. ಇಷ್ಟು ಸುಲಭದಲ್ಲಿ ಸಿಕ್ಕಿದ ಚೆಲುವು ಹಗುರವಾದದ್ದರಿಂದ ಅರಸನ ಆಸೆ ಹೊಸ ಕಡೆಗಳಿಗೆ ಹರಿಯಿತು. ಅದನ್ನು ತೀರಿಸಲು ಬಸವನೇ ಪ್ರಯತ್ನಮಾಡಿ ಮತ್ತಷ್ಟು ಬೆಡಗು ಬಿನ್ನಾಣವನ್ನು ತಂದು ದೊರೆಗೆ ಒದಗಿಸಿದನು.[3] ಅರಮನೆಯಲ್ಲಿ ವ್ಯಭಿಚಾರ ಎನ್ನುವುದಕ್ಕಿಂತ ರಾಜನು ತನ್ನ ಅಧಿಕಾರವನ್ನು ಮತ್ತು ಹಣವನ್ನು ಹೇಗೆ ಸ್ತ್ರೀಯರ ಮೇಲಿನ ದೌರ್ಜನ್ಯಕ್ಕೆ ಬಳಸಿಕೊಳ್ಳುತ್ತಿದ್ದನು ಎಂಬ ಲೇಖಕರ ಆಶಯವನ್ನು ನಾವು ಗಮನಿಸಲಾಗಿದೆ.

ಲೇಖಕರು ಸ್ತ್ರೀ ಸಂವೇದನೆಗೆ ನೀಡಿರುವ ಮಹತ್ವ ಭಗವತಿಯ ಪಾತ್ರದಲ್ಲಿ ಅತ್ಯುತ್ತಮವಾಗಿ ಮೂಡಿಬಂದಿದೆ. ಭಗವತಿ ಲಿಂಗರಾಜನ ದೌರ್ಜನ್ಯಕ್ಕೆ ಒಳಗಾಗಿ ರಾಜ್ಯದಿಂದ ಗಡಿಪಾರಾದ ಒಂಟಿ ಸ್ತ್ರೀಯಾದರು ಎದೆಗುಂದದೆ ಸಾಧನೆಗಳನ್ನು ಮಾಡಿದವಳು. ಭಗವತಿಯ ಮೂಲವನ್ನು ಹೇಳುವಾಗ

ಕೊಡಗಿನಲ್ಲಿ ರಾಜನ ಸರ್ವಾಧಿಕಾರದ ಎದುರು ಸ್ತ್ರೀಯರ ಸ್ಥಿತಿ ಹೇಗಿತ್ತು ಎಂಬುದು ವ್ಯಕ್ತವಾಗಿದೆ.[4] ಆಕೆ ಮರಳಿ ಕೊಡಗಿಗೆ ಬಂದಾಗ ಆಕೆಯ ಸಾಧನೆಯನ್ನು ನೋಡಿ ಮೆಚ್ಚಿಕೊಂಡವರೇ ಹೆಚ್ಚು. ಲೇಖಕರು ಭಗವತಿಯ ಸೌಂದರ್ಯವನ್ನು ಹಾಗೂ ಆಕೆಯ ಬೌದ್ಧಿಕ ಸಾಮರ್ಥ್ಯವನ್ನು ಸಕಾರಾತ್ಮಕವಾಗಿ ಚಿತ್ರಿಸಿದ್ದಾರೆ. ಆಕೆಯ ಜ್ಞಾನ, ಮೆಗಲಿಂಗನೊಡನೆ ಆಕೆ ನಡೆಸಿದ ವಾದದ ತಿರುಳು ಇದೆಲ್ಲವೂ ಸ್ತ್ರೀ ಸಬಲೀಕರಣದ ಮಾರ್ಗವಾಗಿ ನಮಗೆ ಕಾಣುತ್ತದೆ.

ಅರಮನೆಗಳಲ್ಲಿ ಸ್ತ್ರೀಯರಿಗೆ ಆಗುವ ಶೋಷಣೆಗಳು ಕಾದಂಬರಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಚಿಕ್ಕವೀರರಾಜೇಂದ್ರನು ಮದುವೆಯಾದ ಕೆಲವೇ ದಿನಗಳಲ್ಲಿ ತನ್ನ ಹೆಂಡತಿ ಗೌರಮ್ಮಾಜಿಯನ್ನು ಬಯ್ಯುವುದಕ್ಕೆ ಬಡಿಯುವುದಕ್ಕೆ ಪ್ರಾರಂಭಿಸಿದನು. ಈ ಸಂದರ್ಭದಲ್ಲಿ ಆಕೆಯ ಮಾವ ಲಿಂಗರಾಜ ಮತ್ತು ಅತ್ತೆ ದೇವಕ್ಕ ಆಕೆಗೆ ಬುದ್ಧಿ ಹೇಳುವ ಸಂದರ್ಭವನ್ನು ನೋಡಲಾಗಿದೆ.

ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಸಾವಿತ್ರಮ್ಮ ಎಂಬ ಒಂದು ಚಿಕ್ಕ ಪಾತ್ರವು ಕಂಡುಬರುತ್ತದೆ. ಲಕ್ಷ್ಮಿನಾರಾಯಣಯ್ಯ ಎಂಬ ಬ್ರಾಹ್ಮಣ ದಿವಾನನ ತಾಯಿ ಈಕೆ. ಸಾವಿತ್ರಮ್ಮ (ಸಾತಮ್ಮ) ಒಂದು ಕಾಲ್ಪನಿಕ ಪಾತ್ರವಾಗಿದೆ. ತಲೆ ಬೋಳಿಸಿದ ಬಿಳಿವಸ್ತ್ರ ಧರಿಸಿದ ವಯಸ್ಸಾದ ವಿಧವೆ ಸ್ತ್ರೀಯಾಗಿ ಹೀಗೆ ಕಣ್ಣೆದುರು ನಿಲ್ಲುತ್ತಾಳೆ. ಇವರು ರಾಜನೊಂದಿಗೆ ಅತಿಸಲುಗೆಯಿಂದ ಮಾತನಾಡುವ ಏಕೈಕ ಸ್ತ್ರೀಯಾಗಿದ್ದರು, ರಾಜನನ್ನು ಎತ್ತಿ ಆಡಿಸಿದ ಪ್ರೀತಿ ಆ ಸಲುಗೆಯಲ್ಲಿತ್ತು.

ಚಿಕವೀರ ರಾಜೇಂದ್ರ ಕಾದಂಬರಿಯು ಕೇವಲ ಒಂದು ಐತಿಹಾಸಿಕ ಘಟನೆಯ ವರ್ಣನೆ ಮಾತ್ರವಲ್ಲದೆ, 19ನೇ ಶತಮಾನದ ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆಧ್ಯಾತ್ಮಿಕ ಚಿಂತನೆಯ ಸಮಗ್ರ ದಾಖಲೆಯಾಗಿದೆ. ಮಾಸ್ತಿಯವರ ಮಾನವೀಯ ದೃಷ್ಟಿಕೋನ, ನಿರ್ಲಿಪ್ತತೆ ಮತ್ತು ಸಮತೋಲಿತ ವರ್ಣನೆ ಈ ಕೃತಿಯನ್ನು ಜ್ಞಾನಪೀಠ ಪ್ರಶಸ್ತಿಗೆ ಅರ್ಹಗೊಳಿಸಿದೆ ಎಂಬುದು ಗಮನೀಯ ಅಂಶ. ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಸ್ತ್ರೀ ಚಿತ್ರಣವು ಹೀಗೆ ಉತ್ತಮವಾಗಿ ಮೂಡಿಬಂದಿದೆ.

**ಕೊನೆಟಿಪ್ಪಣಿಗಳು.**

1. ಚಿಕವೀರರಾಜೇಂದ್ರ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪುಟ ಸಂಖ್ಯೆ 42.
2. ಅದೇ, ಪುಟ ಸಂಖ್ಯೆ, 385.
3. ಅದೇ, ಪುಟ ಸಂಖ್ಯೆ, 104.
4. ಅದೇ, ಪುಟ ಸಂಖ್ಯೆ, 142.